ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ನೂರ ನಲವತ್ತೊಂದನೆಯ ಅಧಿವೇಶನ

ಶುಕ್ರವಾರ, ದಿನಾಂಕ: 25ನೇ ಸೆಪ್ಟಂಬರ್, 2020

ಪ್ರವಾಸೋದ್ಯಮ ನಿಗಮದಲ್ಲಿ ಬರುವ ಆಸ್ತಿಗಳ ಬಗ್ಗೆ

ಶ್ರೀ ಕಾಂತರಾಜ್ (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

633 (770) ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕರ್ನಾಟಕ ರಾಜ್ಯ ಪ್ರವಾಸೋದ್ಯಮ ನಿಗಮದ ಅಧೀನದಲ್ಲಿ ಬರುವ ಆಸ್ತಿಗಳು ಯಾವುವು ; ಅವು ಎಲ್ಲಿವೆ ; ಅವುಗಳನ್ನು ಯಾವ ಕೆಲಸಗಳಿಗೆ ಉಪಯೋಗಿಸಿಕೊಳ್ಳಲಾಗುತ್ತಿದೆ ; (ವಿವರವಾದ ಜಿಲ್ಲಾವಾರು ಮಾಹಿತಿ ನೀಡುವುದು)

(ಆ) 2001ನೇ ಸಾಲಿನಿಂದ ಇಲ್ಲಿಯವರೆಗೆ ಸದರಿ ಆಸ್ತಿಗಳಲ್ಲಿ ಎಷ್ಟು ಆಸ್ತಿಗಳನ್ನು ಬೇರೆಯವರಿಗೆ/ಸಂಸ್ಥೆ/ಇತರರಿಗೆ ಕ್ರಯ/ಗುತ್ತಿಗೆ/ ಇತರೆ ಮಾಡಿಕೊಳ್ಳಲಾಗಿದೆ ; (ವರ್ಷವಾರು ಮಾಹಿತಿ ನೀಡುವುದು)

(ಇ) ಪ್ರವಾಸೋದ್ಯಮ ಆಸ್ತಿಗಳನ್ನು ರಕ್ಷಿಸಿ ಪ್ರವಾಸೋದ್ಯಮವನ್ನು ಉತ್ತೇಜಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ; (ವಿವರವಾದ ಮಾಹಿತಿ ನೀಡುವುದು)

(ಈ) ವಿಶ್ವ ಪಾರಂಪರಿಕ ತಾಣಗಳು ಕರ್ನಾಟಕದಲ್ಲಿ ಇದ್ದಾಗ್ಯೂ ಪ್ರವಾಸೋದ್ಯಮದಲ್ಲಿ ಕರ್ನಾಟಕವು ಕೇರಳ ಪ್ರವಾಸೋದ್ಯಮಕ್ಕಿಂತ ಹಿಂದೆ ಇರಲು ಕಾರಣಗಳೇನು ; ಇದರ ಸಂಬಂಧ ಪ್ರವಾಸೋದ್ಯಮ ಅಭಿವೃದ್ಧಿ ಪಡಿಸಲು ಸರ್ಕಾರ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ?